ಮಾಡಿ ಅಲ್ಲಿ ಯಾವುದೇ ಅನುಮಾನಕ್ಕೆ ಆಸ್ಪದವಾಗುವ ವಸ್ತುವೋ, ಗಿಫ್ಟೋ, ಕಾರ್ಡೋ... ತಾನು ಕೊಡಿಸದಿರುವ ಬಟ್ಟೆಗಳೋ ಇಲ್ಲವೆಂದು ಖಚಿತಪಡಿಸಿಕೊಂಡು ನಿರಾಳವಾಗುತ್ತಿದ್ದುದು ಕ್ಷಣಕಾಲ ಮಾತ್ರ... ಒಳಗೊಳಗೆ ಆತಂಕ ಹೆಡೆಯಾಡುತ್ತಲೇ ಇತ್ತು. ಎಲ್ಲ ಟಿಪಿಕಲ್ ತಾಯಿಯಂತೆ ರೋಸ್ ಸ್ನಾನಕ್ಕೆ ಹೋದಾದ ಅವಳ ಫೋನಿನ ಇನ್‌ಬಾಕ್ಸ್‌ಗಳನ್ನು ನೋಡುತ್ತಿದ್ದಳು. ಜನ್ಮದಿನ ಶುಭಾಶಯದ ಕಾರ್ಡ್‌ಗಳನ್ನು ಬಿಟ್ಟರೆ ಏನೂ ಕಣ್ಣಿಗೆ ಬಿದ್ದಿರಲಿಲ್ಲ. ಅವನು ಅವಳಿಗೆ ಕೊಟ್ಟಿದ್ದ ಉಡುಗೊರೆಗಳಲ್ಲೂ ಅಂತಹ ವಿಶೇಷವೇನಿರಲಿಲ್ಲ.

ರೋಸ್‌ಳ ಇಂಟರ್ನ್‌ಶಿಪ್ ಕೊನೆಯ ಹಂತ, ಇನ್ನೆರೆಡು ತಿಂಗಳುಗಳಲ್ಲಿ ಮುಗಿದು ಹೋಗುತ್ತೆ ಅನ್ನುವಾಗ, ಅವಳ ಮದುವೆಗೆ ತನ್ನ ಸೋದರ ಮಾವನ ಮೊಮ್ಮಗನ ಪ್ರಸ್ತಾಪ ತವರಿನಿಂದ ಬಂದಾಗ, 'ಇನ್ನು ತಡಮಾಡುವುದು ಬೇಡ, ತಾವಾಗೇ ಕೇಳಿಕೊಂಡು ಬಂದಿದ್ದಾರೆ... ಹುಡುಗ ಎಂ.ಎಸ್. ಮಾಡಿ ಅಮೆರಿಕದ ಸಿಯಾಟಲ್‌ನಲ್ಲಿದ್ದಾನೆ. ಮೈಕ್ರೋಸಾಫ್ಟ್‌ನಲ್ಲಿ ಕೆಲಸ. ಎಂಥ ಹ್ಯಾಂಡ್‌ಸಮ್ ಇದ್ದಾನೆ ಗೊತ್ತಾ... ಇಂಥ ಹುಡುಗ ಸಿಕ್ಕಲು ಕೊಟ್ಟು ಹುಟ್ಟಿರಬೇಕು ವಿಲಿಯಂ' ಅಂತ ಗಂಡನ ಕಿವಿಕಚ್ಚಿ ಒಪ್ಪಿಸಿದಳು. ಮಗಳಿಗೂ ಕನ್ವಿನ್ಸ್ ಮಾಡಲು ಯತ್ನಿಸಿದಾಗ, 'ಮಮ್ಮಿ... ಈಗಲೇ ಮದ್ವೆ ಬೇಡ, ನಾಕುವರ್ಷ ಕೆರಿಯರ್ ಬಿಲ್ಡ್ ಮಾಡಿಕೊಳ್ಳಕ್ಕೆ ಟೈಮ್ ಬೇಕಾಗುತ್ತೆ' ಅಂತ ಮೂತಿಯುಬ್ಬಿಸಿ ಮುನಿಸಿಕೊಂಡ ಮಗಳನ್ನು ಹಗುರಾಗಿ ತೆಗೆದುಕೊಳ್ಳುತ್ತಾ, 'ಎಲ್ಲರೂ ಹಾಗೇ ಹೇಳದು. ಹುಡುಗನ್ನ ನೋಡಿದ ಮೇಲೆ ಚೇಂಜ್ ಆಗ್ತಾಳೆ' ಅಂತ ಹಗುರಾಗಿಬಿಟ್ಟಳು. ಅಂತೂ ರೋಸ್‌ಳ ವಿರೋಧದ ನಡುವೆ ಸ್ಯಾಮ್ಯುಯಲ್ ಎಂಬ ವರ ಕನ್ಯಾವೀಕ್ಷಣೆಗೆ ಬಂದ. ರೂಪ ಸಾದೃಶ್ಯದಲ್ಲಾಗಲಿ, ವಿದ್ಯೆಯಲ್ಲಾಗಲಿ, ಮನೆತನಗಳಲ್ಲಾಗಲೀ ರೋಸ್ ಮತ್ತು ಸ್ಯಾಮ್ಯುಯಲ್ ಅನುರೂಪ ಅಂತ ಯಾರು ನೋಡಿದರೂ ಹೇಳಬಹುದಿತ್ತು. ಸೂಸನಮ್ಮ ಬಹಳ ಸಂಭ್ರಮದಿಂದ ಚಿಕನ್ ಬಿರ್ಯಾನಿ, ಫಿಶ್‌ಫ್ರೈಗಳ ಭೂರಿ ಭೋಜನದೊಂದಿಗೆ ಸಂಬಂಧಿಕರಾಗುವವರನ್ನು ಸತ್ಕರಿಸಿದಳು. ಈ ಮದುವೆ ಆಗೇ ಬಿಡುತ್ತೆ ಅಂತ ಏಳನೇ ಸ್ವರ್ಗದಲ್ಲಿ ತೇಲುವ ಕನಸು ಕಾಣುತ್ತಾ... ಬಂದ ಗಂಡಿನವರು ಒಪ್ಪಿಗೆ ತಿಳಿಸಿದಾಗ ಮಾತ್ರ ವಿಲಿಯಂ, 'ನಮಗೆ ಹದಿನೈದು ದಿನ ಸಮಯ ಬೇಕು. ಮಗಳ ಹತ್ತಿರ ಮಾತಾಡಿ ಹೇಳುತ್ತೇನೆ' ಎಂದಾಗ ಸೂಸನ್ ಬಂದ ಕೋಪವನ್ನು ಹತ್ತಿಕ್ಕಿಕೊಳ್ಳಬೇಕಾಯ್ತು. ಅವರೆಲ್ಲ ಹೋದ ಮೇಲೆ ಮಗಳನ್ನು ಕೂರಿಸಿ ಕೇಳಿದಾಗ, 'ಪಪ್ಪ, ನಂಗೆ ಸ್ವಲ್ಪ ಟೈಮ್ ಬೇಕು' ಎಂದ ಮಗಳಿಗೆ, 'ಓಕೆ ಡಾರ್ಲಿಂಗ್, ಟೇಕ್ ಯುವರ್ ಟೈಮ್' ಅಂದ ವಿಲಿಯಂನನ್ನು ತರಾಟೆಗೆ ತೆಗೆದುಕೊಳ್ಳುತ್ತಾ, 'ಅವಳಿನ್ನು ಚಿಕ್ಕವಳು, ಇಂಥ ಡಿಸಿಶನ್ ತಗೊಳ್ಳೋಕ್ಕೆ ಗೊತ್ತಾಗಲ್ಲ. ನಾವು ದೊಡ್ಡವರು ಹೇಳಿದ್ದು ಕೇಳಬೇಕು. ಎಷ್ಟು ದಿನ ಟೈಮ್ ತಗೊಂಡ್ರೆ ತಾನೆ ಏನು? ಇದಕ್ಕಿಂಥ ಗಂಡು ಸಿಗುತ್ತಾ?' ಅಂತ ಒತ್ತಾಯಿಸಿದಾಗ ತಂದೆ ಮಗಳು ಏನೂ ಮಾತಾಡದೆ ಎದ್ದು ಹೋದರು.

ವೀಕೆಂಡಿಗೆ ಮೈಸೂರಿಗೆ ಹೊರಟು ನಿಂತ ಮಗಳನ್ನು ತಡೆಯುವ ಪರಿ ಹೇಗೆಂದು ಸೂಸನಮ್ಮಳಿಗೆ ಚಿಂತೆಯಾಯಿತು. 'ಈಗ್ಯಾಕೆ? ಏನಿದೆ ಅಲ್ಲಿ? ಯಾವ ಕಸಿನ್ನೂ ಬಂದಿರಲ್ಲ. ರಜವಿಲ್ಲ ಏನಿಲ್ಲ. ಶನಿವಾರ ಹೋಗಿ ಭಾನುವಾರ ಬರಕ್ಕೆ ಯಾಕೆ ಹೋಗ್ಬೇಕು? ಭಾನುವಾರ ಚರ್ಚ್ ಪ್ರೇಯರ್ ಮಿಸ್ ಮಾಡೋದು ಬೇಡ' ಇಂತಹ ಯಾವ ಮಾತುಗಳೂ ಪ್ರಯೋಜನಕ್ಕೆ ಬರಲಿಲ್ಲ. 'ಹೋಗಲಿ ಬಿಡು ಎಷ್ಟು ಫಸ್ ಮಾಡ್ತೀಯಲ್ಲ' ಅನ್ನುವ ಗಂಡನ ಮಾತೂ ಸೇರಿಕೊಂಡು ಮಗಳಿಗದೆಷ್ಟು ಅದಟು ಅನ್ನಿಸಿತವಳಿಗೆ. 'ಜಗಮೊಂಡು, ಬೇಡ ಅಂದಿದ್ದೇ ಮಾಡಬೇಕು' ಅಂತ ಗೊಣಗಿಕೊಂಡರು. ಈಗವಳು ಇದ್ದಕ್ಕಿದ್ದಂತೆ ಮೈಸೂರಿಗೆ ಹೊರಟಿದ್ದು ಅವರ ಅನುಮಾನಕ್ಕೆ, ತಲೆಬಿಸಿಗೆ ಕಾರಣವಾಯ್ತು. ಅವಳು ಅಲ್ಲಿಗೆ ಹೋಗುತ್ತಿರುವುದಕ್ಕೂ ಈ ಗಂಡನ್ನು ಇನ್ನೂ ಒಪ್ಪದಿರುವುದಕ್ಕೂ ಏನೋ ಸಂಬಂಧವಿದೆ ಎಂದವರು ಊಹಿಸಿದರು.